ಮುಖವನ್ನಷ್ಟೇ ಬಿಂಬಿಸುತ್ತಿರಬಹುದು. ತಮ್ಮ ಬಗ್ಗೆ ವಾಸ್ತವಕ್ಕೆ ದೂರವಿರುವಂತಹ ಸಂಗತಿಗಳನ್ನು ತಮ್ಮ ಅಕೌಂಟ್‌ನಲ್ಲಿ ತೋರಿಸುತ್ತಿರಬಹುದು. ಸಾಮಾಜಿಕ ಮಾಧ್ಯಮಗಳ ಮೂಲಕ ಆಕರ್ಷಣೆ ಬೆಳೆದು, ಪರಿಚಯವಾಗಿ, ಪರಿಚಯ ವರ್ಚುವಲ್ ಜಗತ್ತಿನಲ್ಲೇ ಪ್ರೇಮವಾಗಿ ಬೆಳೆದು ಯಾವಾಗ ಮುಖಾಮುಖಿ ಭೇಟಿಯಾಗುವುದೋ, ಆಗ ನೈಜತೆಯನ್ನು ಕಂಡು ನಿರಾಶೆಗೊಳಗಾಗಿರುವ ಅನೇಕ ಉದಾಹರಣೆಗಳಿವೆ.

ಪ್ರೇಮವೆಂಬುದು ಅತ್ಯಂತ ಖಾಸಗಿ ವಿಷಯ. ಸಾಂಪ್ರದಾಯಿಕವಾಗಿ ಪ್ರೇಮ ಸಂಬಂಧದ ವಿಷಯಗಳನ್ನು ಸಮಾಜದಲ್ಲಿ ಜಾಹೀರುಗೊಳಿಸುತ್ತಿರಲಿಲ್ಲ. ತಮಗೆ ಹತ್ತಿರವಿರುವ ಕೆಲವರ ಬಳಿ ಮಾತ್ರ ತಮ್ಮ ಪ್ರೇಮ ಪ್ರಸಂಗದ ಬಗ್ಗೆ ಹೇಳಿರುತ್ತಿದ್ದರು. ಸಾಮಾಜಿಕ ಜಾಲತಾಣಗಳ ಹಾವಳಿಯಿರುವ ಇಂದಿನ ಕಾಲದಲ್ಲಿ, ಪ್ರೇಮವು ಪ್ರದರ್ಶನದ ದ್ಯೋತಕವಾದಂತಿದೆ. ಇಂದು ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್‌ನಂತಹ ಮಾಧ್ಯಮಗಳಲ್ಲಿ ತಮ್ಮ ಪ್ರೇಮ ಸಂಬಂಧದ ಪಟಗಳನ್ನು, ಸೆಲ್ಫಿಗಳನ್ನು ಪೋಸ್ಟ್ ಮಾಡುತ್ತಾರೆ. ತಮ್ಮ ಪ್ರೇಮ ಕತೆಯು ಅತ್ಯಂತ ಸುಂದರ ಮತ್ತು ಶ್ರೇಷ್ಠವಾದದ್ದು ಎಂದು ಪ್ರದರ್ಶಿಸುತ್ತಾರೆ. ತಮ್ಮ ಸಂಬಂಧದ ಸುಖ, ಆತ್ಮತೃಪ್ತಿಗಿಂತ, ಪ್ರೀತಿಯ ಸಾರ್ವಜನಿಕ ಪ್ರದರ್ಶನಕ್ಕೆ ಹೆಚ್ಚಿನ ಒತ್ತು ಕೊಟ್ಟಂತಿದೆ ನಮ್ಮ ಪೀಳಿಗೆ. ಅನೇಕ ಸಂದರ್ಭಗಳಲ್ಲಿ ಸಂಬಂಧಗಳು ಹಳಸುತ್ತಿದ್ದರೂ ಸಾಮಾಜಿಕ ಮಾಧ್ಯಮದಲ್ಲಿ ಮಾತ್ರ ಎಲ್ಲವೂ ಸರಿಯಾಗಿದೆ ಎನ್ನುವಂತೆ ಬಿಂಬಿಸುತ್ತಾರೆ. ಮುಂದೆ ಸಂಬಂಧಗಳು ಮುರಿದು ಬಿದ್ದಾಗ ಸಾಮಾಜಿಕ ಮಾಧ್ಯಮಗಳಲ್ಲಿ ಮೊದಲು ಬಿಂಬಿಸಿದ ವಿಷಯಗಳಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗಿರುವ ಅನೇಕ ನಿದರ್ಶನಗಳಿವೆ.

ಟಿಂಡರ್, ಬಂಬಲ್‌ನಂತಹ ಡೇಟಿಂಗ್ ಆ್ಯಪ್‌ಗಳು ನಮ್ಮ ದೇಶದಲ್ಲಿ ಪ್ರೇಮದ ಪರಿಕಲ್ಪನೆಯನ್ನು ಬದಲಿಸುತ್ತಿವೆ. ಪ್ರೀತಿಯೆಂಬುದು ಎಡಬಲ ಸ್ವೈಪ್ ಮಾಡಿದರೆ ಉಂಟಾಗುವ ಭಾವವೇ? ಡೇಟಿಂಗ್ ಆ್ಯಪ್‌ಗಳು ಪ್ರೇಮ ಸಂಬಂಧಗಳಿಗಿಂತ ಕ್ಯಾಶುವಲ್ ಸಂಬಂಧಗಳನ್ನೇ ಹೆಚ್ಚಾಗಿ ಹುಟ್ಟುಹಾಕುತ್ತವೆ. ಆಧುನಿಕತೆಯ ಹೆಸರಿನಲ್ಲಿ ಪ್ರೇಮವೆಂಬುದು ವಾರಾಂತ್ಯದ ಪಾರ್ಟಿಯೋ, ಮೂವಿಗೋ, ಪಬ್‌ಗೋ ಸೀಮಿತವಾಗುತ್ತಿದೆ. ಮುಖಾಮುಖಿ ಸಂಭಾಷಣೆಗಿಂತ ವರ್ಚುವಲ್ ಜಗತ್ತಿನ ಸಂಭಾಷಣೆಗಳೇ ಹೆಚ್ಚುತ್ತಿವೆ. ಮಾನವ ಸಹಜ ಸಂಭಾಷಣೆ ಗೌಣವಾಗುತ್ತಿದೆ.

ಆಧುನಿಕತೆಯ ರಭಸಕ್ಕೆ ಸಿಕ್ಕು ಮೇಲ್ನೋಟಕ್ಕೆ ಪ್ರೇಮದ ಪರಿಕಲ್ಪನೆ ಬದಲಾದಂತಿದೆ. ಜೊತೆಗೆ ಪ್ರೇಮ ನಿವೇದನೆಯ ರೀತಿಗಳು ಬದಲಾಗಿವೆ. ಆದರೆ ಪ್ರೀತಿಯೆಂಬ ನೈಜ ಭಾವದ ಜೀವಾಳ ಮಾತ್ರ ಬದಲಾಗಿಲ್ಲ ಎಂದು ಆಶಿಸೋಣ.

ಡಾ. ಶಿವಾನಂದ ಬಿ ಹಿರೇಮಠ



ಇರುತ್ತದೆ. ಈ ಕ್ಷಣದಲ್ಲಿ ನಮ್ಮ ಬೊಗಸೆಗೆ ಸಿಕ್ಕ ನೀರು ಇನ್ನೊಂದು ಕ್ಷಣದಲ್ಲಿ ಸಿಗುವುದಿಲ್ಲ. ಹಾಗಾದರೆ ನದಿ ಬದಲಾಗಿದೆಯೋ ಹಾಗೆಯೇ ಇದೆಯೋ? ಸಹಸ್ರ ವರ್ಷಗಳಿಂದ ಮನುಷ್ಯದ ಎದೆಯಿಂದ ಹರಿಯುತ್ತ ಬರುತ್ತಿರುವ ಅನುರಾಗದ ಜೀವನದಿಯೂ ಹಾಗೆಯೇ. ಅದರಲ್ಲಿ ಹರಿಯುವ ನೀರು ಕ್ಷಣಕ್ಷಣಕ್ಕೂ ಬದಲಾಗುತ್ತಿರಬಹುದು. ಒಂದಿಷ್ಟು ಕಾಲ ಅಬ್ಬರಿಸಿ ಉಕ್ಕೇರಬಹುದು. ಇನ್ನೊಂದಿಷ್ಟು ಕಾಲ ಒಣಗಿ ತೆಳುಗೊಳ್ಳಬಹುದು. ಆದರೆ ಆ ಬದಲಾವಣೆಗಳೆಲ್ಲ ನೀರಿನದ್ದೇ ಹೊರತು ನದಿಯನ್ನು ಬಾಧಿಸುವುದಿಲ್ಲ. ಅದೇ ನದಿಯಲ್ಲಿ ನಿಂತು ಹೊಸ ನೀರನ್ನು ಪಡೆಯಲು ಸಾಧ್ಯವಾಗದಿದ್ದರೆ ಆ ಪಾತ್ರಕ್ಕೆ, ಅದರೊಳಗಿನ ಹರಿವಿಗೆ ಯಾವ ಅರ್ಥವೂ ಇರುವುದಿಲ್ಲ.

ಅನಾದಿಯಿಂದಲೂ ಮನುಷ್ಯಲೋಕವನ್ನು ಪೊರೆದಿರುವ ಈ ಪ್ರೇಮದ ನದಿ ಅಮೃತವಾಹಿನಿಯೇ.

‘ಗ್ರೀಷ್ಮಗಳು ನೂರಾರು ಉರಿಸಿದರು ಆರದಿದು
ಸುತ್ತಮುತ್ತಲು ಮರಳು ಮೇಲೆ ಪಾಚಿ.
ಮುತ್ತಿಕೊಂಡರು ಲುಪ್ತವಾಗದೀ ಅಮೃತ ಧುನಿ
ಕಿರಿದಾಗಿ ಬರಿದಾಗಿ ನೀರ ಗೆರೆಯಾಗಿ
ತಳದೊಳೆಲ್ಲೋ ತಳುವಿ ಗುಳುಗುಳಿಸುತಿದೆ ಸೆಲೆಯು
ಏನನೋ ಕಾಯುತಿದೆ ಗುಪ್ತವಾಗಿ’

ಎಂಬ ಗೋಪಾಲಕೃಷ್ಣ ಅಡಿಗರ ಪದ್ಯದ ಮೊದಲೆರಡು ಸಾಲುಗಳು ಹೀಗಿವೆ: ಅಮೃತವಾಹಿನಿಯೊಂದು ಹರಿಯುತಿದೆ / ಮಾನವನ ಎದೆಯಿಂದಲೆದೆಗೆ ಸತತ’.

ಓಲೆಯಲ್ಲಿದ್ದರೂ ವಾಟ್ಸ್‌ಆ್ಯಪ್ ಮೂಲಕ ಹರಿಯುತ್ತಿದ್ದರೂ ಅಮೃತವಾಹಿನಿಯ ಮೂಲಸೆಲೆ ಬದಲಾಗುವುದಿಲ್ಲ ಅಲ್ಲವೇ?

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in